Regd No M 1299 Sri ತಾ|| 13—11—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಸ್ಪತಿ 3 ಸೈ

ಮೈಸೂರಿನ ಬಗೆಗೆ ಕೃಪಾಲಿನಿಗೆ ತುಂಬಾ ಭರವಸೆ ಇದೆ

ದಿವ್ಯವಾಣಿ

ಕಾಲ ಕಳೆದಂತೆ ದಃಖವನ್ನು ವನುಷ್ಯನು ಸಾಮಾನ್ಯವಾಗಿ ಮರೆಯುವನು ಆದರೆ ತದ್ವಿರುದ್ಧವಾಗಿ ದಿನಕಳೆದಂತೆ ಚಿಂತೆಯು ವೃದ್ಧಿಹೊಂದುತ್ತಲೇ ಸಾಗುವುದು. — ಜೀಸಸ್ ಅರಿಚರ

ಮೊನ್ನೆ ಮೊನ್ನೆ ಪೆಪ್ಸುನಿನ ಸಾಂಗದೂರಿನಲ್ಲಿ ಧಕಾಯಿತರು ಎರಡು ಬಸ್ಸುಗಳನ್ನು ಮುತ್ತಿ ಹಣಕಾಸುಗಳ ದರೋಡೆ ಮಾಡಿದರೆಂದು ಅಂಬಾಲಾ ವರದಿ

ಜಬ್ಬಲ್ಪುರದ ನಿವೃತ್ತ ಸೇನಿಕ ಸಂಘ ಪಂ|| ನೆಹರುಗೆ 62 ನೇ ವರ್ಷದ ವರ್ಧಂತಿ ಕಾಣಿಕೆಯಲ್ಲಿ ಖಾದಿ ಉಡುಪುಗಳನ್ನು ಕಳಿಸಿದ್ದಾರೆ

ಕಾಂಗ್ರೆಸ್ ಪಕ್ಷದವರ ಸಭೆ

ಮೈಸೂರು ಮುಖ್ಯಮಂತ್ರಿಯವರಾದ ಶ್ರೀ ಕೆ ಸಿ ರೆಡ್ಡಿಯವರು ಬೆಂಗಳೂರಿನಲ್ಲಿ ನಿನ್ನೆ ಸೇರಿದ್ದ ಶಾಸನ ಸಭೆ ಕಾಂಗ್ರೆಸ್ ಪಕ್ಷದಲ್ಲಿ ರಾತ್ಪಾಧ್ಯಕ್ಷರ ಡೈರೆಕ್ಟಿವ್ ಬಗೆಗೆ ಪಂ|| ನೆಹರುಂವರ ಸಲಹೆಯನ್ನು ಅಂಗೀಕಾರ ಮಾಡಬೇಕೆಂದು ಒತ್ತಾಯ ಮಾಡಿದರು ಈ ಸಮಯದಲ್ಲಿ ಮೈಸೂರು ಸಚಿವರು ರಾಜೀನಾಮೆ ಕೊಟ್ಟ ತೊಡಕು ಪರಿಸ್ಥಿತಿಗೆ ಅನವಕಾಶ ಕೊಡದಂತೆ ಸೂಚಿಸಿ ಪಂಡಿತ ನೆಹರು ಪತ್ರ ಬರೆದಿದ್ದರು 371 ನೇ ವಿಧಿ ಜಾರಿ ಮಾಡಿರುವ ಕ್ರಮ ಸರಿಯಿಲ್ಲ ಇದನ್ನು ಸುಪ್ರೀಂ ಕೋರ್ಟ್‌ಮುಂದೆ ತರಲು ಕೆಲವು ಸದಸ್ಯರು ತಿಳಿಸಿದ್ದಾಗಿ ನಂದಿ ಆ ಅಭಿಪ್ರಾಯ ಸರ್ಕಾರಕ್ಕೆ ಇಷ್ಟವಿಲ್ಲದಿರುವದಾಗಿ ಶ್ರೀ ರೆಡ್ಡಿ ನುಡಿದಂತೆ ಕಿಸಾನ್ ಮಜದೂರ್ ಪ್ರಜಾಪಕ್ಷದ ನಾಯಕರಾದ ಆಚಾರ್ಯ ಕೃಪಾಲಿನಿಯವರು ಮೊನ್ನೆ ದೆಹಲಿಗೆ ಹೋಗುವ ದಾರಿಯಲ್ಲಿ ಕಾನ್ಪುರದಲ್ಲಿ ಬಂದಿಳಿದರೆಂದು ಲಕ್ನೋವಾರ್ತೆ. ಅಲ್ಲಿನ ಪ್ರಜಾಪಕ್ಷ ಕಾರ್ಯಕರ್ತರ ಸಭೆಯಲ್ಲಿ ಭಾಷಣ ಮಾಡುತ್ತಾ, ಮೈಸೂರಿನಲ್ಲಿ ಕೆ. ಎಂ. ಪಿ ಪಕ್ಷ ಭದ್ರವಾಗಿ ನೆಲೆಗೊಳ್ಳುವದಾಗಿ ಅವರು ತಿಳಿಸಿದರು

ಶ್ರೀ ಹೆಚ್. ಎ. ಕಾಮತ್ ಕಾಂಗ್ರೆಸಿಗೆ ರಾಜೀನಾಮೆ ಕೊಟ್ಟರು

ನೆಹರೂರು ಜೀವಿತಕಾಯಿತ ಕಟ್ಟೆ ಮೈದಾನದಲ್ಲಿ ಕಮ್ಯುನಿಸ್ಟ್ ಗುರೀಣ ಶ್ರೀ ಕೆ. ಗೋಪಾಲನ್‌ರನ್ನು ನಾಳೆ ಬೆಳಿಗ್ಗೆ 9 ಗಂಟೆಗೆ ಸ್ವಾಗತಿಸಲಾಗುತ್ತೆ. ನಾಳೆ ಸಂಜೆ 6 ಗಂಟೆಗೆ ಅವರು ಟೌನ್‌ಹಾಲ್ಲಿನಲ್ಲಿ ಭಾಷಣ ಮಾಡುವರು.

ದಿನಾಚರಣೆ

ಶ್ರೀಮನ್ಮಹಾರಾಜರವರ ಎ. ಡಿ ಸಿ. ಗಳಾ, ದರ್ಬಾರ್ ಭಕ್ಷಿಗಳೂ ಆದ ಶ್ರೀ ಹೆಚ್. ಎಲ್. ದೇವರಾಜ ಅರಸು ಸವರ ಅಧ್ಯಕ್ಷತೆಯಲ್ಲಿ 18 ತಾ|| ಸಂಜೆ 5 ಗಂಟೆಗೆ ಮುದ್ದುಸ್ವಾಮಿ ದೀಕ್ಷಿತರ ದಿನಾಚರಣೆಯನ್ನು ಮೈಸೂರು ನೂಂಡಿರಸ್ತೆಯಲ್ಲಿರುವ ಸಹಕಾರಭವನದಲ್ಲಿ ಶ್ರೀ ವಂಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ಏರ್ಪಡಿಸಿದ್ದಾರೆ.

ವರದಿ ಪ್ರತಿಭಟಿಸಲು ಸಚಿವ ಮಂಡಲಿ ರಾಜೀನಾಮೆ ಕೊಡಬೇಕೆಂದು ಹಲವರ ಹೇಳಿಕೆಯೆಂದು ವರದಿ ರಾಜೀನಾಮೆ ಕೊಟ್ಟ ಮೇಲೆ ಪುನಃ ನೀವೇ ಸಚಿವರಾಗುವಿರಂತೆ ಎಂದು ಶ್ರೀ ಸಂಜರಾಜೆ ಅರಸಿನವರು ತಿಳಿಸಿದರೆಂದು ವರದಿ

ಏನು ತೀರ್ಮಾನವು ಆಗಲಿಲ್ಲ

ಮಾರ್ತೆಗಳು

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರು ಅಸೆಂಬ್ಲಿಯಲ್ಲಿ ನಿನ್ನೆ ದಿವಸ ಕೇಳಿದೆಯಿತ್ತು ಕರ್ನಾಟಕ ಏಕೀಕರಣ ಸಮಸ್ಯೆ ಬಗೆಗೆ ಚರ್ಚಿಸಲು ಈಗ ಕಾಲವಿಲ್ಲ ಭಾರತ ಸರ್ಕಾರ ಈ ಕುರಿತು ನಿರ್ಧಾರ ಮಾಡಬೇಕಾದುದು ಎಂದು ತಿಳಿಸಿದರೆಂದು ಬೆಂಗಳೂರು ವಾರ್ತೆ ತಿಳಿಸುತ್ತದೆ

ಬೊಂಬಾಯಿ ಸರ್ಕಾರದವರು ಗುಜರಾತಿನ ಬಾಧಿತ ಪ್ರದೇಶಗಳಲ್ಲಿ ಓಡಾಡುವ ಪಡಿತರ ಅಂಗಡಿಗಳನ್ನು ಇಡಲು ನಿರ್ಧಾರ ಮಾಡಿರುವದಾಗಿ ತಿಳಿದು ಬಂದಿದೆ.

ಮೊನ್ನೆ ರಾಜಮಹೇಂದ್ರಿ ಪೌರಸಭೆಯ ಉಪಾಧ್ಯಾನಾವಣೆ ನಡೆದು ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾದ ಶ್ರೀ ಎ. ವಿ ರವಣಯ್ಯನವರು ಕಾಂಗ್ರೆಸ್ಸು ಅಭ್ಯರ್ಥಿಯಾದ ಶ್ರೀ ಎ. ವಿ ರವಣಯ್ಯನವರನ್ನು ಪರಾಜಯಗೊಳಿಸಿದರು

ಅಖಿಲ ಭಾರತ ಜನಸಂಘದ ಅಧ್ಯಕ್ಷ ಡಾ|| ಶಾಂ ಪ್ರಸಾದ ಮುಖರ್ಜಿಯವರು ಮೊನ್ನೆ ಅಂಬಾಲಾದಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸ್ ಅಡಳಿತದಿಂದ ದೇಶದ ಹಣಕಾಸಿನ ಪರಿಸ್ಥಿತಿ ಇನ್ನೂ ಕೆಟ್ಟಿದೆಯೆಂದರು

ಇಂಟರ್ ಅಸೋಸಿಯೇಷನ್ ಜೂನಿಯರ್ ಕ್ರಿಕೆಟ್ ಪಂದ್ಯದಲ್ಲಿ ಮೈಸೂರು ಮದರಾಸನ್ನು ಸೋಲಿಸಿತು

ನೇಪಾಳಿ ಕಾಂಗ್ರೆಸಿನ ಒಪ್ಪಮತವಿರುವ ಮಂತ್ರಿಮಂಡಲವನ್ನು ರಾಜಾ ತ್ರಿಭುವನರು ರಚಿಸಿದರೆಂದು ಖಟ್ಮಂಡು ವಾರ್ತೆ ರಾಜೀನಾಮೆ ಕೊಡುವ ಮುನ್ನ ಕಾಂಗ್ರೆಸ್ ಮಂತ್ರಿಮಂಡಲ 2 ನೂರು ಮಂದಿ ನಾನಾ ಪಕ್ಷದ ರಾಜಕೀಯ ಬಂದಿಗಳನ್ನು ಬಿಟ್ಟರು ಸೂತನ ಸಚಿವ ಮಂಡಲ ರಚಿತವಾಗುವ ವರಿಗೆ ಇದೇ ಸಚಿವ ಮಂಡಲ ಅಡಳಿತದಲ್ಲಿರುವದು

ರೂ. 21304—12—9 ಬೆಂಗಳೂರಿನಲ್ಲಿ ನಡೆದ ಎ. ಐ. ಸಿ ಸಿ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಿದ್ದ ಕಾಂಗ್ರೆಸ್ ನಾಯಕರ ಸತ್ಕಾರಕೂಟಕ್ಕೆ ಮೈಸೂರು ಸರ್ಕಾರ ವೆಚ್ಚ ಮಾಡಿದೆ.

ಪಂ|| ನೆಹರು ದೆಹಲಿಯಲ್ಲಿ ನಿನ್ನೆ ಹೇಳಿಕೆಯಿತ್ತು, ಈಗ ಕಾಂಗ್ರೆಸ್ ಉಮೇದುವಾರನ್ನು ಸಿಲ್ಲಿಸಿರುವ ಕ್ರಮ ಸರಿ ಇಲ್ಲದಿರಬಹುದು, ಆದರೆ ಬೇರೆ ದಾರಿ ಹೋಗಿ ಇಲ್ಲವೆಂದಿರುವರು

ಬಾಡಿಗೆ ಬಿಡಲಾಗುವದು

ಸರ್ಕಾರಿ ಬರಾಕುಗಳಲ್ಲಿ ಇರುತ್ತಿರುವ ನಿರಾಶ್ರಿತ ಜನರಿಂದ ಸರ್ಕಾರಕ್ಕೆ ಬರಬೇಕಾದ ಬಾಡಿಗೆಯಲ್ಲಿ 27 ಲಕ್ಷ ರೂಪಾಯಿ ಒರತಕ್ಕದ್ದು ಬಾಕಿ ಉಳಿದಿದ್ದರಿಂದ ಬೊಂಬಾಯಿ ಸರ್ಕಾರದವರು ಅದರಲ್ಲಿ ಅರ್ಧವನ್ನು ಬಿಟ್ಟುಬಿಡಲು ಒಪ್ಪಿಕೊಂಡಿದ್ದಾರೆಂದು ತಿಳಿದುಬರುತ್ತದೆ

ಭಾರತದ ಚಿತ್ರ ಬೇಕು

ಪಾಕಿಸ್ತಾನದಲ್ಲಿಯು ಚಲನಚಿತ್ರ ಉದ್ಯಮಿಗಳಿಗೆ ಪಾಕಿಸ್ತಾನದ ಜನರ ಬೇಡಿಕೆಯನ್ನು ಪೂರೈಸುವದು ಸಾಧ್ಯವಾಗದ್ದರಿಂದ ಭಾರತದಿಂದ ಚಿತ್ರಪಠಗಳನ್ನು ತಂದು ಪ್ರದರ್ಶಿಸುವುದು ಅಗತ್ಯವಾಗಿದೆಯೆಂದು ಲಾಹೋರಿನ ಚಲಚ್ಚಿತ್ರ ಪ್ರದರ್ಶಕರೂ ಹಂಚಿಕೆಗಾರರೂ ತಿಳಿಸಿರುವರು.

ಸೇಲ್ಸ್‌ಟ್ಯಾಕ್ಸು ಇಲ್ಲ

ಅಲಹಾಬಾದಿನ ಸೇಲ್ಸ್ ಟ್ಯಾಕ್ಸ್ ಅಪಲೇಟ್ ಕೋರ್ಟಿನ ಜಡ್ಜರಾದ ಶ್ರೀ ಎಸ್. ಡಿ. ಸಿಂಗ್ ಅವರು ಮೊನ್ನೆ ಮೊನ್ನೆ ಕಾಶಿಯ ಸಂಸ್ಕೃತ ವಿದ್ವಾಂಸರಾದ ಕನ್ನಯ್ಯ ಲಾಲ್ ಮುಕುಂದಲಾಲರವರು ಸವನುಗಳ ಮಾರಾಟದ ಮೇಲೆ ಸೇಲ್ಸ್ ಟ್ಯಾಕ್ಸ್ ಹೇರಿದ್ದರ ವಿರುದ್ಧ ಮಾಡಿದ್ದ ಅಪೀಲನ್ನು ಮಾನ್ಯ ಮಾಡಿ ಉತ್ತರ ಪ್ರದೇಶ ಸೇಲ್ಸ್‌ಟ್ಯಾಕ್ಸ್ ಕಾಯದೆಯ ಪ್ರಕಾರ ಸವನುಗಳ ಮೇಲೆ ಮಾರಾಟಕರ ಹೇರಲು ಬರುವದಿಲ್ಲವೆಂದು ತೀರ್ಪು ಕೊಟ್ಟರು.

ನಿರ್ಧರಿಸಿದೆ

ಅಮೇರಿಕ ಸೆನೆಟ್ ಉಪಸಮಿತಿ, ಅಮೇರಿಕಾದಲ್ಲಿರುವ, ಕಮ್ಯುನಿಸ್ಟ್ ರಾಜ್ಯಗಳ ರಾಯಭಾರಿಗಳ ಮೇಲೆ ತೀವ್ರ ಹದರಿ ಇಟ್ಟು ಅವರ ಚಲನವಲನಗಳ ಸಂಗ್ರಹ ಮಾಡಲು ನಿರ್ಧರಿಸಿದೆ.

ನಾಗರಿಕ ಅಮೇರಿಕದಲ್ಲಿ

40 ಮಿಲಿಯ ಅಮೇರಿಕರಿಗೆ ಸ್ನಾನದ ಮನೆಗಳಿಲ್ಲ.

27 ಮಿಲಿಯ ಅಮೆರಿಕರಿಗೆ ಅಡಿಗೆ ಮನೆಯಲ್ಲಿ ಬಚ್ಚಲಿಲ್ಲ.

2 ಮಿಲಿಯ ಅಮೇರಿಕದ ಮಕ್ಕಳು ಸ್ಥಳಾಭಾವದಿಂದ ಪಾಠಶಾಲೆಗೆ ಹೋಗುವುದಿಲ್ಲ.

ತೀವ್ರ ಕಷ್ಟವಾಗಿದೆ

31 ಲಕ್ಷ ಮಂದಿ ಉತ್ತರ ಪ್ರದೇಶದಲ್ಲಿ ತೀವ್ರ ಆಹಾರ ಅಭಾವದಿಂದ ನರಳುತ್ತಿದ್ದಾರೆಂದು ಲಕ್ನೋ ವಾರ್ತೆ.

ಬ್ರಿಟಿಷರ ಶೃಂಗಾರ ವೆಚ್ಚ

ಹನ್ನೆರಡು ಕೋಟಿ !

ಕೇಶ, ಮುಖ, ವೈ ಶೃಂಗಾರಕ್ಕಾಗಿ ಬ್ರಿಟಿಷರು ಪ್ರತಿ ವರ್ಷ ಹನ್ನೆರಡು ಕೋಟಿ ಪೌಂಡುಗಳನ್ನು ವೆಚ್ಚ ಮಾಡುತ್ತಾರಂತೆ; ಈ ವೆಚ್ಚದಲ್ಲಿ ಹೆಂಗಸರದು ಮೂರು ನಾಲ್ಕಾಂಶ ; ಗಂಡಸರದು ಒಂದು ನಾಲ್ಕಾಂಶ ಪ್ರಮಾಣವಂತೆ.

ಈ ಹನ್ನೆರಡು ಕೋಟಿಯಲ್ಲಿ ನಾಲ್ಕು ಕೋಟಿ ಕೇವಲ ಕೂದಲ ಶೃಂಗಾರಕ್ಕಾಗಿ (ಕೂದಲು ಕತ್ತರಿಸುವುದು ಮೊದಲಾದುವುಗಳ. ; ಉಳಿದ ಎಂಟು ಕೋಟಿ ಪೌಂಡು ಮೈಮುಖ ಶೃಂಗಾರಕ್ಕಾಗಿ

ಈ ಕೇಶ – ಮುಖ – ವೈ ಶೃಂಗಾರದ ಪ್ರತಿಯೊಬ್ಬ ಬ್ರಿಟಿಷರ ಮಾಸಿಕ ಸರಾಸರಿ ಮೂರು ಪೌಂಡು ಹತ್ತು ಷಿಲಿಂಗು ಹತ್ತು ಪೆನ್ಸು ; ಪ್ರತಿಯೊಬ್ಬ ಹೆಂಗಸಿನ ಸರಾಸರಿ ಐದು ಪೌಂಡು ಎರಡೂವರೆ ಪೆನ್ಸು.

ಇಷ್ಟೊಂದು ವೈಚಿತ್ರ್ಯವೆಂದರೆ, ಸರಿವಂತರಲ್ಲಿ ಗಂಡಸರಿಗಿಂತ ಹೆಂಗಸರು ಮತ್ತು ಮಧ್ಯಮ ತರಗತಿಯ ಹಾಗೂ ಬಡವರಲ್ಲಿ ಹೆಂಗಸರಿಗಿಂತ ಗಂಡಸರು ಕೂದಲು ಶೃಂಗಾರದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇರುತ್ತಾರೆ (ಬ. ಹಿಂ)

ತೂಕ ಇಳಿಸುವ ಚಳವಳಿ

ವಿಕಿವಿಧಾರಿ ಬೊಜ್ಜು ಬೆಳೆದದರ ದೆಸೆಯಿಂದ ಸಂಯುಕ್ತ ಅಮೇರಿಕಾದಲ್ಲಿ ಇತ್ತೀಚೆಗೆ ಹಲವು ಅಕಾಲ ಮರಣಗಳು ಸಂಭವಿಸಿ ಅಲ್ಲಿಯ ವಿಮಾ ಕಂಪೆನಿಗಳು ತುಂಬಾ ನಷ್ಟ ಅನುಭವಿಸಬೇಕಾಗಿ ಬಂತು. ಇದೀಗ ಅಮೇರಿಕದ ವಿಮಾ ಕಂಪೆನಿಗಳೆಲ್ಲ ಸೇರಿ ತೂಕ ಇಳಿಸುವ ಚಳವಳಿಯೊಂದನ್ನು ಕಾರ್ಯರೂಪಕ್ಕೆ ಹಚ್ಚಲು ನಿರ್ಣಯಿಸಿರುವವು.

ಪ್ರತಿಸ್ಪರ್ಧಿಸುವುದಿಲ್ಲ

ಅಮೇರಿಕದ ಅಧ್ಯಕ್ಷ ಚುನಾವಣೆಗೆ ಜನರಲ್ ಐಸೆನ್‌ಹೋವರರು ಹುರಿಯಾಳಾಗಿ ನಿಂತರೆ ಅಧ್ಯಕ್ಷ ಟ್ರೂಮನ್ ಪ್ರತಿಸ್ಪರ್ಧಿಯಾಗುವನಿಲ್ಲವೆಂದು ತಿಳಿಯಲಾಗಿದೆ.

ಭಾರತದಲ್ಲಿ 14 ಲಕ್ಷ ಮಂದಿ ಭಿಕ್ಷುಕರಿರುವರಂತೆ !

ಹಿಂದೂ ಮಹಾಸಭೆಯ ಪ್ರಸಿದ್ಧ ಮುಖಂಡರಾದ ವೀರ ಸಾವರ್ಕರರು ಅನಾರೋಗ್ಯ ಮತ್ತು ವೃದ್ಧಾಪ್ಯಗಳ ಕಾರಣಗಳಿಂದ ಮಹಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವಂತೆ !

— ಮುಂದಿನ ಬದಲಾವಣೆ —

ಮೋತಿಲಾಲ್ ಶ್ರೀಲಕ್ಷ್ಮಿ

.... ಚಿತ್ರ ಮಂದಿರಗಳಲ್ಲಿ ....

ಜ್ಞಾನಾಂಬಿಕಾರವರ ಅತ್ಯಮೋಘ ತೆಲುಗು ಚಿತ್ರ

ಮಂತ್ರದಂಡಂ

— ತಾರಾಗಣ —

* ನಾಗೇಶ್ವರರಾವ್ * ಸಿ ಎಸ್ ಆರ್ * ಲಿಂಗಮೂರ್ತಿ
* ಶಿವರಾವ್ * ಶ್ರೀರಂಜಿನಿ * ಜಯಮ್ಮ * ಬಾಲಸರಸ್ವತಿ

ಲಕ್ಷ್ಮಿಯಲ್ಲಿ — ಈಗ ನಡೆಯುತ್ತಿದೆ

ಮಂತ್ರಿಕುಮಾರಿ

(ಮನೋಹರ ತಮಿಳು ಚಿತ್ರ)

— R. V. PICTURES Release

ಉಡ್‌ಲಾಂಡ್ಸ್

ಚಿತ್ರ

ಜನಭರಿತ 2 ನೇ ವಾರ ಅಪೇರ—

9–11–51 ರಿಂದ

ಐನಾ ಪಿಕ್ಚರ್ಸ್‌ರವರ ಸುಮನೋಹರ ಸಾಮಾಜಿಕ ಹಿಂದಿ ಚಿತ್ರ

ಗುಮಾಸ್ತ Gumastha

ಪಾತ್ರ— ನಿಗಾರ್, ವಾಸ್ತಿ, ಮಿಜರ್ಜಮುಷ್ತಾಫ್, ಕುಲದೀಪ್

ಪ್ರತಿ ದಿನ 3 ಪ್ರದರ್ಶನಗಳು



ರಣಜಿತ್

9–11–51 ರಿಂದ

ಏಕ್ ಥಾ ರಾಜ

ಮನಮೋಹಕ ಹಿಂದಿ ಚಿತ್ರ

ಪಾತ್ರ— ಅಂಜಲಿದೇವಿ, ಮಾಧುರಿದೇವಿರಾಮಚಂದರ್ | ಪ್ರತಿ ದಿನ 3 ಆಟಗಳು

ಬೆಳಿಗಿನ ಪ್ರದರ್ಶನ 16–11–51 ರಿಂದ ಷಹಜಹಾನ್ (ಹಿಂದಿ)

ಗೋ ಸಂರಕ್ಷಣೆ ಮಾಡಿ

Protect the Cow

ರಾಮ ವಿವಾಹ

(ಹಿಂದಿ)

ಪಾತ್ರ– ಪೃಥ್ವಿರಾಜ್, ಉಮಾಕಾಂತ್

ಶೋಭನಸಮರ್ಥ [ದಿನ 3 ಆಟಗಳು

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

Edited, Printed and Published by Dharma Prachara Nirata M. S. Krishna Rao. at the Satyavadi Press Chamrajpuram Mysore